## ಪ್ರಕಟಣೆ

ಲಘು ಪ್ರಕಟಣೆ ಭಾಗ -2

(ಸಾಂಸಧಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ 26ನೇ ಫೆಬ್ರವರಿ 1996

ಸಂಖ್ಯೆ: 139

ಬೆಂಗಳೂರಿನ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯವರ ಕೋರಿಕೆಯ ರೀತ್ಯಾ ದಿನಾಂಕ 28ನೇ ಫೆಬ್ರವರಿ 1996 ರಂದು ಬುಧವಾರ ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ವಿಧಾನ ಸೌಧದ ಮೂರನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿ ಸ್ವಇಚ್ಛಾ ರಕ್ತಧಾನ ಶಿಬಿರವೊಂದನ್ನು ಏರ್ಪಡಿಸಲು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಹಾಗೂ ಕರ್ನಾಟಕ ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರವರು ಅನುಮತಿಯನ್ನು ನೀಡಿರುತ್ತಾರೆ.

ಮೇಲ್ಕಂಡ ಸಮಾರಂಭದ ಉದ್ಘಾಟನೆಯನ್ನು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಡಿ.ಬಿ. ಕಲ್ಮಣಕರ್‌ರವರು ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರವರಾದ ಶ್ರೀ ರಮೇಶ್ ಕುಮಾರ್‌ರವರು ವಹಿಸುವರು ಹಾಗೂ ಪ್ರಶಂಸನಾ ಪತ್ರಗಳನ್ನು ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಂ.ಸಿ.ನಾಣಯ್ಯನವರು ವಿತರಿಸುವರು.

ಈ ಸಂದರ್ಭದಲ್ಲಿ ಸ್ವಇಚ್ಛೆಯಿಂದ ರಕ್ತಧಾನ ಮಾಡಲಿಚ್ಚಿಸುವ ಸದನಗಳ ಮಾನ್ಯ ಸದಸ್ಯರು, ಅವರ ಬೆಂಬಲಿಗರು ಮತ್ತು ಪತ್ರಿಕಾ ಪ್ರತಿನಿಧಿಗಳು ಹಾಗೂ ವಿಧಾನ ಮಂಡಲದ ಅಧಿಕಾರಿ ನೌಕರರ ವರ್ಗದವರು ಸದರಿ ಶಿಬಿರದಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಅಧ್ಯಕ್ಷರು : ದಯಮಾಡಿ, ಧೃಡಕಾಯಾರಾಗಿರತಕ್ಕಂಥ ಕೆ.ಎನ್. ನಾಗೇಗೌಡರು, ಇಂತಹವರೆಲ್ಲಾ ಬೆಳಿಗ್ಗೆ ಬಂದು ರಕ್ತ ಕೊಡಬೇಕಂದು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ನನಗೆ ತೋಚಲಿಲ್ಲ. ಏಕೆಂದರೆ ಕೆ.ಎನ್. ನಾಗೇಗೌಡರು ನಿಮ್ಮ ಜೊತೆಯಲ್ಲಿ ಇದ್ದವರಾದ್ದರಿಂದ ಅಗತ್ಯ ಇದೆ

## ಗಮನ ಸೆಳೆಯುವ ಸೂಚನೆ

**ವಿಜಾಪುರ ನಗರ ಕುಡಿಯುವ ನೀರಿನ ಕೃಷ್ಣ ಎರಡನೇ ಯೋಜನೆಗೆ ಹಣದ ಕೊರತೆಯಿಂದ ಕಾಮಗಾರಿ ಕೆಲಸ ಮಂದಗತಿಯಿಂದ ಸಾಗಿರುವುದರಿಂದ ನಗರದ ನಾಗರೀಕರಿಗೆ ತೊಂದರೆ.**

+ ಶ್ರೀ ಬಸವನಗೌಡ ರಾಮನಗೌಡ ಪಾಟೀಲ (ವಿಜಾಪುರ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ವಿಜಾಪುರ ನಗರದ ಕುಡಿಯುವ ನೀರಿನ ಕೃಷ್ಣ ಎರಡನೆ ಯೋಜನೆಯ ಕಾಮಗಾರಿ ಇತ್ತಿತ್ತಲಾಗಿ ಹಣದ ಕೊರತೆಯಿಂದ ತೀವ್ರ ಮಂದಗತಿಯಿಂದ ಸಾಗುತ್ತಿದ್ದು ಇದನ್ನು ಪೂರ್ತಿಗೊಳಿಸಲು 1200 ಲಕ್ಷ

ರೂಪಾಯಿಗಳು ತೀವ್ರ ಅವಶ್ಯವಿದ್ದು ಹಣದ ಬಿಡುಗಡೆ ಸಕಾಲದಲ್ಲಿ ಆಗದೇ ಹೋದಲ್ಲಿ ವಿಜಾಪುರದ ನಾಗರೀಕರು ತೀವ್ರ ತೊಂದರೆಗೆ ಒಳಗಾಗುತ್ತಾರೆ ಎಂಬ ಭಾವನೆ ಮೂಡಿದ್ದು, ಯೋಜನೆ ಪೂರ್ತಿಗೊಳ್ಳುವುದು ಸಂಶಯಾತೀತ ಪರಿಸ್ಥಿತಿ ಒದಗಿದ್ದು, ಸರ್ಕಾರ ಇದಕ್ಕೆ ಕೈಗೊಂಡಿರುವ ಕ್ರಮಗಳು ಮತ್ತು ನಿರ್ಧಿಷ್ಟ ದಿನಾಂಕವನ್ನು ವಿಜಾಪುರ ನಾಗರೀಕರಿಗೆ ತಿಳಿಯಲು ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಮಂತ್ರಿಗಳು ಗಮನವನ್ನು ಸೆಳೆಯುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

+ ಶ್ರೀ. ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಹಾಗೂ ಕಾಡ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ,ವಿಜಾಪುರ ನಗರ ಕುಡಿಯುವ ನೀರಿನ ಕೃಷ್ಣ ಎರಡನೇ ಯೋಜನೆಯು ಕಾಮಗಾರಿ ಇತ್ತಿತ್ತಲಾಗಿ ಹಣ ತೊಂದರೆಯಿಂದ ತೀವ್ರ ಮಂದಗತಿಯಿಂದ ಸಾಗುತ್ತಿದ್ದು ಇದನ್ನು ಪೂರ್ತಿಗೊಳಿಸಲು 1200 ಲಕ್ಷ ರೂಪಾಯಿಗಳು ತೀವ್ರ ಅವಶ್ಯವಿದ್ದು ಬಿಡುಗಡೆ ಸಕಾಲದಲ್ಲಿ ಆಗದೇ ಹೋದಲ್ಲಿ ವಿಜಾಪುರದ ನಾಗರೀಕರು ತೀವ್ರ ತೊಂದರೆಗೆಗೆ ಒಳಗಾಗುವರು ಎಂಬ ಭಾವನೆ ಮೂಡಿದ್ದು ಯೋಜನೆ ಪೂರ್ತಿಗೊಳ್ಳುವುದು ಸಂಶಯಾತೀತ ಪರಿಸ್ಥಿತಿ ಒದಗಿದ್ದು ಸರ್ಕಾರ ಇದಕ್ಕೆ ಕೈಗೊಂಡಿರುವ ಕ್ರಮಗಳು ಮತ್ತು ನಿರ್ಧಿಷ್ಟ ದಿನಾಂಕವನ್ನು ವಿಜಾಪುರ ನಾಗರೀಕರಿಗೆ ತಿಳಿಯಲು ಈ ಸಂಬಂಧದಲ್ಲಿ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

**ಉತ್ತರ :**

ವಿಜಾಪುರ ನಗರಕ್ಕೆ ನೀರು ಸರಬರಾಜು ಮಾಡುವ ಒಂದು ಯೋಜನೆಗೆ ಸರ್ಕಾರ ಆದೇಶ ಸಂಖ್ಯೆ :ಎನ೫ : 214: ಯುಡಬ್ಲೂಎಸ್: 89: ದಿನಾಂಕ: 30-3-1990ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಯೋಜನೆಯ ಅಡಿ ಅನೇಕ ಘಟಕಗಳ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದ್ದು ಪ್ರಗತಿಯಲ್ಲಿವೆ. ಮತ್ತು ಕೆಲವು ಘಟಕಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಮಂಜೂರಾಗಿರುವ ಅಂದಾಜಿನ ಪ್ರಕಾರ ಯೋಜನೆಯ ಆರ್ಥಿಕ ಮಾದರಿ ಮತ್ತು ವಿವಿಧ ಮೂಲಗಳಿಂದ ಹಣ ಪಡೆದಿರುವ ವಿವರವನ್ನು ಇಲ್ಲಿ ಕೊಡಲಾಗಿದೆ.

| | ಮೂಲ | ಪಾಲಿನ ಮೊತ್ತ (ಲಕ್ಷ ರೂ.ಗಳಲ್ಲಿ) | ಸಂದಾಯವಾದ ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|---|
| 1) | ಜೀವವಿಮಾ ನಿಗಮದ ಸಾಲ | 835.00 | 654.00 |
| 2) | ಸರ್ಕಾರದ ಸಾಲ | 417.50 | 417.50 |
| 3) | ಬಿಜಾಪುರ ನಗರಸಭೆ ವಂತಿಕೆ | 217.50 | 78.00 |
| 4) | ನಗರಾಭಿವೃದ್ಧಿ ಪ್ರಾಧಿಕಾರ ವಂತಿಕ | 200.00 | 127.00 |
| 5) | ಹುಡ್ಕೋ ಆಪರೇಷನಲ್ ಫೈನಾನ್ಸ್ | - | 350.01 |
| 6) | ಡಿಬೆಂಚರ್ಸ್ | - | 24.00 |
| | ಒಟ್ಟು ರೂ. | **1670.00** | **1650.51** |

ಒಟ್ಟು 1670.00 ಲಕ್ಷ ರೂ. ಮೊತ್ತದಲ್ಲಿ ವಿವಿಧ ಮೂಲಗಳಿಂದ 1650.51 ಲಕ್ಷ ರೂ. ಗಳನ್ನು ಪಡೆಯಲಾಗಿದೆ. ಆದರೆ ಯೋಜನೆಗೆ ಈವರೆಗೆ ಆಗಿರುವ ವೆಚ್ಚ 2204.89 ಲಕ್ಷ ರೂ.ಗಳು ಅಂದರೆ ವಿವಿಧ ಮೂಲಗಳಿಂದ ಸಂಗ್ರಹವಾಗಿರುವ ಹಣಕ್ಕಿಂತ ಸುಮಾರು 6 ಕೋಟಿ ರೂ.ಗಳನ್ನು ಮಂಡಳಿಯು ಈ ಯೋಜನೆಗೆ ವೆಚ್ಚ ಮಾಡಿದೆ.

ಈ ಯೋಜನೆಯ ಕೆಲಸವನ್ನು ಹೆಚ್ಚಿನ ವಿಳಂಬವಿಲ್ಲದೆ ಪೂರ್ತಿ ಮಾಡುವ ದೃಷ್ಟಿಯಿಂದ ಮಂಡಳಿಯು ಹುಡ್ಕೋ ಸಾಲದ ಮೊತ್ತವಾದ 758.92 ಲಕ್ಷ ರೂ.ಗಳನ್ನು ಆಪರೇಷನಲ್ ಫೈನಾನ್ಸ ಎಂದು ಪಡೆಯಲಿದೆ. ಇದರಲ್ಲಿ ಮಂಡಳಿಯು ಈಗಾಗಲೇ 350.01 ಲಕ್ಷ ರೂ.ಗಳನ್ನು ಹುಡ್ಕೋದಿಂದ ಪಡೆದಿದೆ. ಈ ಹಣವನ್ನು ಯೋಜನೆಗೆ ವೆಚ್ಚ ಮಾಡಲಾಗಿದೆ ಮತ್ತು ಉಳಿದ ಮೊತ್ತವನ್ನು ಸಹ ಹುಡ್ಕೋದಿಂದ ತೆಗೆದುಕೊಳ್ಳಲಾಗುವುದು.

ಈ ಮಧ್ಯೆ ಸಾಮಾಗ್ರಿ ಬೆಲೆಗಳು ಮತ್ತು ಕೂಲಿ ದರಗಳಲ್ಲಿ ಹೆಚ್ಚಳವಾಗಿರುವುದರಿಂದಲೂ, ಟೆಂಡರ್ ಪ್ರೀಮಿಯಂ ಮತ್ತು ಯೋಜನೆಯ ಕೆಲಸದ ಅವಧಿ ಹೆಚ್ಚಿದುದರಿಂದ, ಯೋಜನೆಯ ವೆಚ್ಚ ಹೆಚ್ಚಾಗುತ್ತದೆ. ಪರಿಷ್ಕೃತ ಅಂದಾಜಿನ ಮೊತ್ತ ಸುಮಾರು 35.00 ಕೋಟಿ ರೂ.ಗಳಾಗಬಹುದು. ಪರಿಷ್ಕೃತ ಅಂದಾಜು ಮೊತ್ತದ ಆರ್ಥಿಕ ಮಾದರಿ ಈ ರೀತಿ ಇದೆ.

| | ಮೂಲ | ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|
| 1) | ಜೀವವಿಮಾ ನಿಗಮದ ಸಾಲ | 835.00 |
| 2) | ಸರ್ಕಾರದ ಸಾಲ | 1007.08 |
| 3) | ನಗರ ಸಭೆಯ ವಂತಿಕೆ | 455.00 |
| 4) | ನಗರಾಭಿವೃದ್ಧಿ ಪ್ರಾಧಿಕಾರದ ವಂತಿಕೆ | 420.00 |
| 5) | ಹುಡ್ಕೋ ಆಪರೇಷನಲ್ ಫೈನಾನ್ಸ | 758.92 |
| 6) | ಡಿಬೆಂಚರ್ಸ್ | 24.00 |
| | ಒಟ್ಟು | **3500.00** |

ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳಾದ ಬಿಜಾಪುರ ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ಪರಿಷ್ಕೃತ ಆರ್ಥಿಕ ಮಾದರಿಯ ಪ್ರಕಾರ ಉಳಿದ ಮೊತ್ತವನ್ನು ಸಂದಾಯ ಮಾಡಬೇಕಾಗುತ್ತದೆ. ಸರ್ಕಾರವು ಸಾಕಷ್ಟು ಹಣ ಲಭ್ಯವಿಲ್ಲದಿದ್ದರೂ ಸಹ ಈ ಯೋಜನೆಗೆ ಸಾಧ್ಯವಾದಷ್ಟು ಅನುದಾನ ಕೊಡಲು ಪ್ರಯತ್ನ ಮಾಡುತ್ತಿದೆ ಮತ್ತು ಕೆಲಸವನ್ನು ಪ್ರಗತಿಯಲ್ಲಿಟ್ಟಿದೆ.

ವಿಜಾಪುರ ನಗರದ ಜನತೆಯ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ತೆಗೆದುಕೊಂಡಿರುವ ಈ ಯೋಜನೆ ಬಹಳ ದೊಡ್ಡದು. ಎಲ್ಲಾ ಸ್ಥಳೀಯ ಸಂಸ್ಥೆಗಳೂ ಸಹ ತಮ್ಮ

ವಂತಿಕೆಯನ್ನು ಪೂರ್ತಿಯಾಗಿ ಸಂದಾಯ ಮಾಡಿದರೆ ಈ ಯೋಜನೆಯನ್ನು ಡಿಸೆಂಬರ್ 96ಕ್ಕೆ ಪೂರ್ತಿ ಮಾಡಬಹುದು. ಸರ್ಕಾರವು ಸಹ ತನ್ನ ಸಾಲಿನ ಸಾಲವನ್ನು ಕೊಟ್ಟು ಸಾಧ್ಯವಾದಷ್ಟು ಬೇಗ ಯೋಜನೆಯನ್ನು ಪೂರ್ತಿ ಮಾಡಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ : ಸನ್ಮಾನ್ಯ ಅಧ್ಯಕ್ಷರೆ,ಈ ಯೋಜನೆ 1991 ರಿಂದ ಪ್ರಾರಂಭವಾಗಿ ಇವತ್ತು ಸುಮಾರು ಎರಡು ಪಟ್ಟಾಗಿ ಅದರ ಮೇಲೆ ಮತ್ತೆ ಎರಡು ಕೋಟಿ ರೂಪಾಯಿಗಳ ಯೋಜನೆಯಾಗಿ ಇವತ್ತು ನಿಂತಿದೆ. ಸರ್ಕಾರಕ್ಕೆ ಅನೇಕ ಮೂಲಗಳಿಂದ ಬರಬೇಕಾದಂಥ ನಗರಸಭೆ ವಂತಿಕೆ ನಾಲ್ಕು ಕೋಟಿ 55 ಲಕ್ಷ ರೂಪಾಯಿಗಳು ಬರಬೇಕೆಂದು ಮಾನ್ಯ ಸಚಿವರು ಈ ಒಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಇವತ್ತು ನಗರಸಭೆಯ ಆರ್ಥಿಕ ಪರಿಸ್ಥಿತಿ ಬಹಳ ಗಂಭೀರ ಇರುವುದರಿಂದ ಇಲ್ಲಿಯವರೆಗೆ ಅದು ಮೊದಲು ಕೊಡಬೇಕಾದಂಥ ವಂತಿಗೆ ಎರಡು ಕೋಟಿ ಹದಿನೇಳು ಲಕ್ಷ ರೂಪಾಯಿಗಳ, ಪೈಕಿ ಕೇವಲ ಎಂಬತ್ತೆಂಟು ಲಕ್ಷ ರೂಪಾಯಿಗಳನ್ನು ಮಾತ್ರ ನೀಡಿದ್ದಾರೆ. ಇದರಿಂದ, ಸನ್ಮಾನ್ಯ ಸಚಿವರು ಬಿಜಾಪುರದ ಸರ್ಕಾರದ ನಗರಾಭಿವೃದ್ಧಿ ಒಂದು ಕಾರ್ಯಕ್ರಮದಲ್ಲಿ ಜನರಿಗೆ ಒಂದು ಮಾತನ್ನು ಕೊಟ್ಟಿದ್ದರು. ಅದೇನೆಂದರೆ ಡಿಸೆಂಬರ್ 1996ರೊಳಗಾಗಿ ಈ ಯೋಜನೆಯನ್ನು ಪೂರ್ತಿ ಮಾಡುತ್ತೇವೆನ್ನುವ ಭರವಸೆಯನ್ನು ನೀಡಿದ್ದರು. ಆದರೆ ಇವತ್ತು ನನ್ನ ಈ ಗಮನಸೆಳೆಯುವ ಸೂಚನೆ ಕೊಟ್ಟಂಥ ಉತ್ತರದಲ್ಲಿ, ಸರ್ಕಾರವು ಸಾಕಷ್ಟು ಹಣ ಲಭ್ಯವಿಲ್ಲದಿದ್ದರೂ ಸಹ ಈ ಯೋಜನೆಗೆ ಸಾಧ್ಯವಾದಷ್ಟು ಅನುದಾನ ಕೊಡಲು ಪ್ರಯತ್ನ ಮಾಡುತ್ತಿದೆ. ಮತ್ತು ಈ ಯೋಜನೆಯನ್ನು ಡಿಸೆಂಬರ್ 96ಕ್ಕೆ ಪೂರ್ತಿ ಮಾಡಬಹುದು ಎಂಬ ಒಂದು ಸಂದೇಹಾಸ್ಪದವಾದ ಉತ್ತರವನ್ನು ಕೊಟ್ಟಿದಾರೆ. ಮೊದಲಿಗೆ ವಿಜಾಪುರ ಕುಡಿಯುವ ನೀರು ಸಮಸ್ಯೆ ಅತಿ ಗಂಭಿರವಿದ್ದುದರಿಂದ, 15 ದಿನಕ್ಕೆ ಒಮ್ಮೆ ನೀರು ಬರುವಂಥ ಒಂದು ಕೆಟ್ಟ ಪರಿಸ್ಥಿತಿ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಉಪಾಧ್ಯಕ್ಷರು: ಬಸವನಗೌಡರೇ, ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ : ಅದಕ್ಕೆ ನಾನು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಡಿಸೆಂಬರ್ 96ರ ಒಳಗಾಗಿ ಈ ಯೋಜನೆಯನ್ನು ಪೂರ್ತಿ ಮಾಡಲಿಕ್ಕೆ ಸರ್ಕಾರ ಬದ್ಧವಿದೆಯೇ ಅಥವಾ ಇಲ್ಲವೇ ಎನ್ನುವಂಥ ಮೊದಲನೆಯ ಪ್ರಶ್ನೆಗೆ ಉತ್ತರ ಕೊಡಬೇಕು. 1996ರ ಡಿಸೆಂಬರ್ ಒಳಗಾಗಿ ಈ ಯೋಜನೆಯನ್ನು ಪೂರ್ತಿ ಮಾಡಬೇಕಾದರೆ, ಯಾವ ಯಾವ ರೀತಿಯಿಂದ ಹಣವನ್ನು, ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಯೋಜನೆಯನ್ನು ಮುಗಿಸಲಿಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಡಿಸೆಂಬರ್ 1996 ಕ್ಕಿಂತ ಮೊದಲು ಈ ಯೋಜನೆಯನ್ನು ಪೂರ್ಣಗೊಳಿಸಲಿಕ್ಕೆ ಬದ್ಧವಿದೆ. ಆದರೆ ಅದಕ್ಕೆ ವಿವಿಧ ಲೋಕಲ್ ಬಾಡಿಗಳಿಂದ, ಮತ್ತೊಂದು ಕಡೆಯಿಂದ ಹಣ ಕೂಡ ಬರಬೇಕಾಗುತ್ತದೆ. ಅದನ್ನೆಲ್ಲಾ ಮಾಫಿ ಮಾಡಿದ್ದೇವೆ ಎಂದಲ್ಲ. ಅದೆಲ್ಲಾ ಬಂದರೆ, ಈಗಾಗಲೇ ಸರ್ಕಾರ ತನ್ನ ವತಿಯಿಂದ 6 ಕೋಟಿ ರೂಪಾಯಿ, ತನ್ನ ಷೇರು ಎಷ್ಟಿದೆ, ಅದಕ್ಕಿಂತ ಹೆಚ್ಚು ಖರ್ಚು ಮಾಡಿದೆ. ಸರ್ಕಾರದವರು ಪ್ರಯತ್ನ

ಮಾಡುತ್ತಿದ್ದಾರೆ, ಬರುವ ಡಿಸೆಂಬರ್ ಒಳಗಾಗಿ ನಾವು ಕುಡಿಯುವ ನೀರಿನ ಯೋಜನೆ ಪೂರ್ಣ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಲೋಕಲ್ ಬಾಡಿಯವರು ಮುನಿಸಿಪಾಲಿಟಿಯವರು, ಪ್ರಾಧಿಕಾರದವರು ತಮ್ಮ ಷೇರ್ ಕೊಡಬೇಕಾಗುತ್ತದೆ. ಬೇರೆ ಹುಡ್ಕೋ ಬೋನ್ಸ್, ಮತ್ತೊಂದು ಸಿಗಬಹುದು. ಆದರೆ ಲೋಕಲ್ ಬಾಡಿಯೇ ಅಷ್ಟೊಂದು ಹಣ ಕೊಡುವುದಕ್ಕಾಗುವುದಿಲ್ಲ. ಸರ್ಕಾರದ ಪತಿಯಿಂದಲೇ ಸಂಪೂರ್ಣ ಭರಿಸಬೇಕೆಂದರೆ ಕಷ್ಟವಾಗುತ್ತದೆ. ಲೋಕಲ್ ಬಾಡಿಗಳಿಗೂ ಜವಾಬ್ದಾರಿಗಳು ಇರುತ್ತವೆ. ಅವರೂ ಸಹ ಎಲೆಕ್ಟೆಡ್ ರೆಪ್ರೆಸೆಂಟಿಟೀವ್ ಆಗಿರುತ್ತಾರೆ. ಅವರಿಗೂ ಟ್ಯಾಕ್ಸ ಹೇರುವ ಅಧಿಕಾರ ಇದೆ. ಆ ದೃಷ್ಟಿಯಿಂದಲೂ ಮುನಿಸಿಪಾಲಿಟಿಯವರು ಸ್ವಲ್ಪ ಮುಂದೆ ಬಂದರೆ, ಸರ್ಕಾರ ಈ ಡಿಸೆಂಬರ್ 1996ರ ಒಳಗಾಗಿ ಈ ಯೋಜನೆಯನ್ನು ಪೂರ್ಣಗೊಳಿಸುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತೇನೆ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್: ಪ್ರಾಧಿಕಾರ ಎಂದರೆ ಯಾವುದು? ಸರ್ಕಾರ ಬಿಟ್ಟು ಬೇರೆ ವ್ಯವಸ್ಥೆ ಇದೆಯೇ ಹೇಗೆ? ಇವತ್ತು ಆರ್ಥಿಕ ಮುಗ್ಗಟ್ಟಿನಿಂದ ನಗರಸಭೆಗಳು ಕೊಟ್ಟ ಪರಿಸ್ಥಿತಿಯಲ್ಲಿ ಇವೆ. ನೀವು ನಗರಸಭೆಯ ಮೇಲೆ ಹಾಕಿ ಇದನ್ನು ಡಿಸೆಂಬರ್ 1996ರ ಒಳಗಾಗಿ ಮಾಡುವುದಿಲ್ಲ ಎನ್ನುವಂಥಾದ್ದನ್ನು ನೇರವಾಗಿ ಉತ್ತರ ಹೇಳದಿದ್ದರೂ, ವಿಜಾಪುರ ಕುಡಿಯುವ ನೀರಿನ ಯೋಜನೆ 1996ರ ಡಿಸೆಂಬರಗೆ ಆಗುವುದಿಲ್ಲ ಎನ್ನುವಂಥ ಸಂದೇಹದ ಉತ್ತರವನ್ನು ಹೇಳುತ್ತಿದ್ದಾರೆ. ಇದರಿಂದ ವಿಜಾಪುರ ಜನ ಬಹಳಷ್ಟು ಭಯಭೀತರಾಗಿದ್ದಾರೆ. ಅನಿವಾರ್ಯವಾಗಿ, ಒಬ್ಬ ಶಾಸಕರಾಗಿ ನಾವು ಇದರ ಸಲುವಾಗಿ ಹೋರಾಟ ಮಾಡಬೇಕಾಗುತ್ತದೆ ಮತ್ತು ನಾವು ಅಮರಣಾಂತ ಉಪವಾಸ, ಈಗಾಗಲೇ ಹಿಂದೆ ಕೂಡ ನಾನು ಅಮರಣಾಂತ ಉಪವಾಸ ಕುಳಿತಂಥ ಸಂದರ್ಭದಲ್ಲಿ ಅನೇಕ ಕೋಟಿಗಳನ್ನು ಸಂಗ್ರಹಿಸಿತ್ತು. ಸರ್ಕಾರವೇ ಇದನ್ನು ಜವಾಬ್ದಾರಿ ತೆಗೆದುಕೊಂಡು, ನಗರಸಭೆಗೆ ಬರುವಂಥ ಆದಾಯ ಮೂಲಗಳನ್ನು ಅವರೇ ಕ್ರೂಢೀಕರಣ ಮಾಡಿ ಈ ಕೆಲಸ ಮಾಡಬೇಕಾಗುತ್ತದೆಯೇ ಹೋರತು, ಕೇವಲ ನಗರಸಭೆ, ಪ್ರಾಧಿಕಾರದಿಂದ ಇದು ಸಾಧ್ಯವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಸರ್ಕಾರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವೈಜನಾಥ್ ಪಾಟೀಲ್: ಈಗ ಸರ್ಕಾರದಲ್ಲಿ ಈಗಾಗಲೇ ಬ್ಯಾಲೆನ್ಸ ಫಂಡ್ ಅವೈಲಬಲ್ ಅಂತ ಅಂದರೆ ಹುಡ್ಕೋದಿಂದ 4 ಕೋಟಿ ಮತ್ತು ಎಲ್.ಐ.ಸಿ ಯಿಂದ 2 ಕೋಟಿ, ಒಟ್ಟು 6 ಕೋಟಿ ರೂಪಾಯಿ ಅವೈಲಬಲ್ ಇದೆ. ಕೆಲಸ ನಡೆಯುತ್ತಿದೆ. ಆದರೂ ಕೂಡ ಸಿಟಿ ಮುನಿಸಿಪಾಲಿಟಿಯಿಂದ ಮತ್ತು ಪ್ರಾಧಿಕಾರದಿಂದ ಏನು ಹಣ ಬರಬೇಕು, ಅಷ್ಟು ಹಣ ಬರದೇ ಇದ್ದುದರಿಂದ ಸರ್ಕಾರ ಯೋಚನೆ ಮಾಡುತ್ತಿದೆ. ಕುಡಿಯುವ ನೀರಿನ ಸಲುವಾಗಿ ಅಟಲೀಸ್ಟ ನಾವು ಮೂರನೇ ಒಂದು ಭಾಗ ತೆಗೆದು ಅವರಿಂದ ಆದಷ್ಟು ಮಿನಿಮಂ ಹಣ, 10 ಪರ್ಸೆಂಟ್ ಅಥವಾ 15 ಪರ್ಸೆಂಟ್ ಹೇಗೆ ಏನಾದರೂ ಕೊಡಬೇಕು ಎಂಬುದು ಕ್ಯಾಬಿನೆಟ್‌ನಲ್ಲಿ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಹ್ಹಾಗೆ ಆಯಿತು ಎಂದರೆ ಅದಕ್ಕಿಂತ ಕಡಿಮೆ ಹಣ, ಅವರ ಷೇರ್ ಎಷ್ಟು ಬರುತ್ತದೆ ಅಷ್ಟು ಕಟ್ಟಬೇಕಾಗುತ್ತದೆ. ಕಟ್ಟುವ ತನಕ ಕೆಲಸ ನಿಂತಿಲ್ಲ. ಈಗಾಗಲೇ ಬೇರೆ ಯಾವ ಮೂಲಗಳಿಂದ ಹಣ

ಇದೆ, ಆ ಹಣದಿಂದ ಕೆಲಸ ನಡೆಯುತ್ತಿದ್ದೇವೆ. ಬರುವ ಡಿಸೆಂಬರ್ ಒಳಗೆ ನಾವು ಕೆಲಸ ಪೂರ್ಣ ಮಾಡುವ ಪ್ರಯತ್ನ ಮಾಡುತ್ತೇನೆ. ತಾವು ಲೋಕಲ್ ಎಂ.ಎಲ್.ಎ ಇದ್ದೀರಿ, ತಾವೂ ಕೂಡ ತಮ್ಮ ಲೋಕಲ್ ಬಾಡೀಸ್ ಮೇಲೆ, ಪ್ರಾಧಿಕಾರದ ಮೇಲೆ ಇನಫ್ಲೂಯೇನ್ಸ್ ಬೀರಿ ತಮ್ಮಷೇರನ್ನು, ಕೊನೆಯ ಪಕ್ಷ ಮೂರನೇ ಒಂದು ಭಾಗ ಅಲ್ಲದಿದ್ದರೂ ಎಷ್ಟು ಸಾಧ್ಯವೋ, 10 ಪರ್ಸೆಂಟು, 15 ಪರ್ಸೆಂಟು ಆಷ್ಟಾದರೂ ಕಟ್ಟಲಿಕ್ಕೆ ತಾವು ತಯಾರು ಮಾಡಬೇಕು, ಮನವೊಲಿಸಬೇಕು ಎಂದು ಹೇಳುತ್ತೇನೆ.

## ನಿಯಮ 351ರ ಮೇರೆಗೆ

**ಶಿವಮೊಗ್ಗ ಜಿಲ್ಲೆಯ ಮರಾಠಿ ಜನಾಂಗದವರನ್ನು ಪರಿಶಿಷ್ಟ ಪಂಗಡ ಎಂದು ಪರಿಗಣಿಸಿ ಸೌಲಭ್ಯ ನೀಡುವ ಬಗ್ಗೆ.**

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದಿಂದ ವಲಸೆ ಬಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಸಾಗರ ತಾಲ್ಲೂಕುಗಳಲ್ಲಿ ಕೃಷಿ ಕಾರ್ಮಿಕರಾಗಿ, ಚಿಕ್ಕ ರೈತಾಪಿ ವೃತ್ತಿಯಲ್ಲಿ ಮರಾಠಿ ಜನಾಂಗ ಅನೇಕ ವರ್ಷಗಳಿಂದ ವಾಸವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಜನಾಂಗವನ್ನು ಪರಿಶಿಷ್ಟ ಪಂಗಡ ಎಂದು ಪರಿಗಣಿಸಿ ಸೌಲಭ್ಯ ನೀಡುತ್ತಿದ್ದು, ಇದೇ ಜನಾಂಗಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಈ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ? ಇದರಿಂದ ಈ ಜನಾಂಗಕ್ಕೆ ಸಿಗಬಹುದಾದ ಎಲ್ಲಾ ಸೌಲಭ್ಯಗಳಿಂದ ಅರ್ಹತೆ ಇದ್ದೂ ವಂಚಿತರಾಗುತ್ತಿರುವುದರಿಂದಾಗಿ ಆ ಜನಾಂಗ ಸಂಘಟಿತರಾಗಿ ಅನೇಕ ಮನವಿ ಸಲ್ಲಿಸಿದ್ದಾಗ್ಯೂ ಯಾವುದೇ ಪ್ರಯೋಜನ ಆಗದಿರುವುದು ದುರದೃಷ್ಟಕರ. ಇದೊಂದು ಸಾವಿರಾರು ಬಡ ಕುಟುಂಬಗಳ ಬದುಕಿನ ಸಮಸ್ಯೆ ಆಗಿರುವುದರಿಂದ ಮಾನ್ಯ ಸಮಾಜ ಕಲ್ಯಾಣ ಸಚಿವರು, ಶಿವಮೊಗ್ಗ ಜಿಲ್ಲೆಯಲ್ಲಿ ವಾಸ ಮಾಡುವ ದಕ್ಷಿಣ ಕನ್ನಡ ಮೂಲದ ಮರಾಠಿ ಜನಾಂಗಕ್ಕೆ ಪರಿಶಿಷ್ಟ ಪಂಗಡದ ಸೌಲಭ್ಯ ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲು ಅವರ ಗಮನ ಸೆಳೆಯುತ್ತೇನೆ.

ಶ್ರೀ ರಮೇಶ್ ಸಿ ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಪ್ರಕಟಿಸಿರುವ ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಮರಾಠ (Maratha) (ಕೊಡಗು ಜಿಲ್ಲೆಯಲ್ಲಿನ) ಮತ್ತು ಮರಾಠಿ (Marathi) (ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ) ಜನಾಂಗವನ್ನು ಸೇರಿಸಲಾಗಿದೆ. ಅಂದರೆ ಕೊಡಗು ಜಿಲ್ಲೆಗೆ ಸೇರಿದ ಮರಾಠ ಜನಾಂಗವು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಮರಾಠಿ ಜನಾಂಗವು ಪರಿಶಿಷ್ಟ ವರ್ಗದವರಿಗೆ ಸಿಗುವಂತಹ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ಬೇರೆ ಜಿಲ್ಲೆಗಳಿಗೆ ಸೇರಿದ ಮರಾಠ ಅಥವಾ ಮರಾಠಿ ಜನಾಂಗವು ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸುಮಾರು 490 ಕುಟುಂಬಗಳು, ಹೊಸನಗರ ತಾಲ್ಲೂಕಿನಲ್ಲಿ ಸುಮಾರು 134 ಕುಟುಂಬಗಳು ಮತ್ತು ಸಾಗರ ತಾಲ್ಲೂಕಿನಲ್ಲಿ ಸಮಾರು 29 ಮರಾಠಿ ಕುಟುಂಬಗಳ ಜನಾಂಗವು ವಾಸವಾಗಿರುವುದು ಇತ್ತೀಚೆಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ನಡೆಸಿದ ಸಮೀಕ್ಷೆಯಿಂದ ತಿಳಿದು ಬರುತ್ತಿದೆ. ಈ ಎಲ್ಲಾ ಜನಾಂಗವು ಮೂಲತಹ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವರೇ ಅಥವಾ ಇಲ್ಲವೇ ಎಂಬ ಬಗ್ಗೆ